## ಇಲ್ಲಿಯವರೆಗೆ

ಚಿತ್ರೀಕರಣ ಯುನಿಟ್‌ನವರು ಬೇರೆ ಕೆಲಸದ ನಿಮಿತ್ತ ತೆರಳಿದಾಗ ಸಂಜೆಯಾಗಿತ್ತು. ಮನೆಗೆ ಬಂದು ವಿಶ್ರಮಿಸಿದ ಚಂದನಿಕಾ ಚಹ ಕುಡಿದು ಹೊರಗೆ ಸುತ್ತಾಡಲು ಹೊರಡುತ್ತಾಳೆ. ಕಾಲುದಾರಿಯಲ್ಲಿ ಹಾದು ಹೋಗಿ ಜನಸಂಚಾರವಿಲ್ಲದ ಕಡೆಗೆ ನಡೆಯುತ್ತಾಳೆ. ಹತ್ತಿರದಲ್ಲೇ ನದಿ ಇರುವುದನ್ನು ತಿಳಿದುಕೊಂಡು ಅತ್ತಕಡೆ ಹೆಜ್ಜೆ ಹಾಕುತ್ತಾಳೆ. ನದಿಪಾತ್ರದ ಆಚೆಕಡೆ ಏರಿ ಹತ್ತುವುದು ಕಾಣಿಸುತ್ತದೆ. ಏರಿಯ ಮೇಲೆ ಮರದ ಕೆಳಗೆ ಆನಂದ ನಿಂತಿರುವುದು ಕಾಣಿಸುತ್ತದೆ. ಚಂದನಿಕಾಳನ್ನು ಕಂಡು ಅಚ್ಚರಿಯಾಗಿ ತಾನೇ ದಂಡೆಯಂಚಿಗೆ ಬರುತ್ತಾನೆ. ನದಿಪಾತ್ರಕ್ಕೆ ಬಂದ ಚಂದನಿಕಾ ಆನಂದ ಸಲಹೆಯಂತೆಯೇ ನದಿಯಲ್ಲಿ ನಡೆಯುತ್ತಾಳೆ. ಮೊಣಕಾಲಿನವರೆಗಿನ ನೀರಿನಲ್ಲಿ ನಡೆಯುವುದು ಆಕೆಗೆ ಹೊಸ ಅನುಭವ. ಇವತ್ತು ಶೂಟಿಂಗ್ ಇಲ್ಲವೇ ಎಂಬುದನ್ನು ಕೇಳುತ್ತಾನೆ. ಬಳಿಕ ಇಬ್ಬರ ಓದು, ವಿದ್ಯಾಭ್ಯಾಸ, ಹವ್ಯಾಸಗಳ ಬಗ್ಗೆ ಮಾತುಕತೆ ನಡೆಯುತ್ತದೆ. ಈ ಮಧ್ಯೆ ಧಾರಾವಾಹಿ ಜನಪ್ರಿಯತೆಯತ್ತ ಸಾಗುತ್ತದೆ. ಭವನವನ್ನು ನೋಡುವ ಸಲುವಾಗಿ ಜನ ಜಮಾಯಿಸತೊಡಗುತ್ತಾರೆ. ಆದರೆ ಯಾರಿಗೂ ಒಳಗೆ ಎಂಟ್ರಿ ಇರುವುದಿಲ್ಲ.

ಮತ್ತೊಂದು ದಿನ ಮಧ್ಯಾಹ್ನವೇ ಶೂಟಿಂಗ್ ಮುಗಿಯುತ್ತದೆ. ಬಳಿಕ ಅಡ್ಡಾಡಲು ಚಂದನಿಕಾ ಹೊರಡುತ್ತಾಳೆ. ಮನೆಯವರ ಅನುಮತಿ ಪಡೆದು ಆನಂದನೂ ಹೊರಡುತ್ತಾಳೆ. ಮಧ್ಯೆ ನೆಲ್ಲಿಕಾಯಿ ತಿಂದು ಭತ್ತದ ಗದ್ದೆಯ ಬದುವಿನಲ್ಲಿ ಸಾಗುತ್ತಾರೆ. ಚಂದನಿಕಾಗೆ ಇವೆಲ್ಲವೂ ಹೊಸ ಅನುಭವ



ನೀಡುತ್ತದೆ. ಆದಾಗಿ ಚಂದನಿಕಾ ಶೂಟಿಂಗ್‌ಗೆ ರೆಡಿಯಾಗಬೇಕು ಎಂದು ನಿರ್ದೇಶಕ ಹೇಳುತ್ತಾನೆ. ಆದರೆ ನಿರ್ಮಾಪಕ ಇನ್ನೂ ಹಣ ಕೊಟ್ಟಿಲ್ಲ ಎಂಬುದನ್ನು ನಾಯ್ಡು ಸ್ಪಷ್ಟಪಡಿಸಿ ಇಡೀ ಸೆಟ್‌ನಲ್ಲಿ ಕೊಂಚ ಗೊಂದಲ ಉಂಟಾಗುತ್ತದೆ.

'ಇಲ್ಲಿದ್ದ ರಾಜ್ಯ, ನಾಕು ಮತ್ತು ಐದನೇ ಶತಮಾನದಲ್ಲಿ ಉಚ್ಛ್ರಾಯದಲ್ಲಿದ್ದದ್ದು. ಅನಂತರ ಬೇರೆ ಕಡೆ ಏನೇನೊ ನಡೆಯಿತು. ಎಲ್ಲ ಅರಸೊತ್ತಿಗೆಗಳಿಗಾಗುವುದೇ ಆಯಿತು. ಇದು ಚರಿತ್ರೆಯಲ್ಲಿ ಹಿಂದೆ ಸರಿಯಿತು. ದಟ್ಟಾರಣ್ಯ ಪ್ರದೇಶವಾಗಿದ್ದ ಇಲ್ಲಿ ಮುಖ್ಯ ರಾಜಮಾರ್ಗ ಹತ್ತಿರ ಹಾದು ಹೋಗೋದಿಲ್ಲ. ಮತ್ತೊಂದೆಂದರೆ ಇದು ಖಾಸಗಿ ಆಸ್ತಿ' ವಿವರಿಸಿದ.

'ಮತ್ತ ರಾಜನ ಕೋಟೆ, ಅರಮನಿ ಇವೆಲ್ಲ?'

'ಸಾವಿರದ್ಯೆನೂರ ವರ್ಷ ಹಿಂದಿನ ಸಂಗತಿ. ಕೋಟೆ ಪಳೆಯುಳಿಕೆಯಷ್ಟೆ ಇದೆ. ಅರಮನೆ ಸಂಗತಿ ಪತ್ತೆಯಾಗಿಲ್ಲ' ಅಂದವ '...ಕಾಲಪ್ರವಾಹದಲ್ಲಿ ಏನೇನೋ ಆಗತದೆ. ಸೂಪಾ ಅನ್ನೊ ಹಳೆಯ ತಾಲ್ಲೂಕು ಪಟ್ಟಣವೆ ಅಣೆಕಟ್ಟಿನ ನೀರಲ್ಲಿ ಮುಳುಗಿ ನೆನಪಷ್ಟೆ ಆಗಿ ಉಳಿದದ್ದು ನಿಂಗೊತ್ತಿದೆ!' ನಕ್ಕ.

ಪಾಟೀಲ ಇಲ್ಲಿಗೆ ಬರುವಾಗ ಧಾರಾವಾಹಿಯ ನಿರ್ದೇಶಕರು, ಮುಖ್ಯ ನಟ ಮತ್ತು ನಟಿಯನ್ನು ಭೆಟ್ಟಿಯಾಗಿ ಅವರ ಫೋಟೊ ಮತ್ತು ಚಿತ್ರೀಕರಣದಲ್ಲಿ ಬಂದ ಬಂಗಲೆಯ ಫೋಟೊ ಸಂಗಡ ಏಳೆಂಟು ಸಾಲು ಬರೆಯುವ ಉದ್ದೇಶವಿಟ್ಟುಕೊಂಡಿದ್ದ. ಆದರೀಗ ಈ ಸೌಧವನ್ನು ಕಂಡ ಮೇಲೆ ಅದರ ಇತಿಹಾಸ ಸಮೇತ ಐದಾರು ಫೋಟೊ ಹಾಕಿ, ಒಂದಿಡೀ ಪುಟದ ಲೇಖನವನ್ನು ಸಿನಿಮಾ ಪುರವಣಿಗೆ ಹಾಕುವುದೇ ಸರಿ ಅಂತ ಅವನಲ್ಲಿಯ ಪತ್ರಕರ್ತ ಜಾಣ್ಮೆ ಹೇಳಿತ್ತು. ತನ್ನ ಉದ್ದೇಶವನ್ನು ವಿವರವಾಗಿ ಆನಂದನೆದುರು ಬಿಡಿಸಿಟ್ಟ. ಆನಂದನಿಗಿದು ಸಣ್ಣ ಆತಂಕಕ್ಕೆ ಕಾರಣವಾಯಿತು. ಮೂಲತಃ ಅವರ ಕುಟುಂಬ ಪ್ರಚಾರಪ್ರಿಯವಲ್ಲ. ಇದು ಸುಮ್ಮನೆ ಜನಸಂದಣಿಯನ್ನು ಸೆಳೆದು ತಮ್ಮ ಖಾಸಗಿತನಕ್ಕೆ ಭಂಗ ತರಬಹುದೆಂಬುದು ಅವನ ಭಯವಾಗಿತ್ತು. ಅದನ್ನು ಪಾಟೀಲನೆದುರು ಬಿಚ್ಚಿಟ್ಟ. ಅರ್ಥ ಮಾಡಿಕೊಂಡ ಪಾಟೀಲನಲ್ಲಿಯ ಪತ್ರಕರ್ತ ಮತ್ತು ಆತಿಥೇಯನ ಮೈತ್ರಿ ಮುಖಾಮುಖಿಯಾಗುತ್ತ ಯೋಚನೆಗೀಡಾದ. ನಂತರ ಭವನದ ಫೋಟೊ ಹಾಕಿ ಒಂದು ಸಂಕ್ಷಿಪ್ತ ಲೇಖನ ಬರೆಯುವುದಾಗಿಯು, ಇತಿಹಾಸವನ್ನು ವೈಭವೀಕರಿಸದೆ ಒಳಪುಟದಲ್ಲಿ ಹಾಕುವುದಾಗಿ ಒಪ್ಪಿಕೊಂಡ. ಇದೇ ಕಾರಣಕ್ಕೆ ಆನಂದನೂ ತನ್ನ ಮನೆತನದ ಬಗ್ಗೆ ಹೆಚ್ಚೇನೂ ವಿವರವಾಗಿ ಹೇಳಹೋಗಲಿಲ್ಲ.

ನಾಯ್ಡು ಜೊತೆ ಕಥೆಯ ಬಗ್ಗೆ ಹತ್ತು ನಿಮಿಷ ಚರ್ಚೆ ನಡೆಯಿತು. ಚಂದನಿಕಾ ಹೆಚ್ಚೇನು ಹೇಳಲಿಲ್ಲ. ಧಾರಾವಾಹಿಯ ಟಿಆರ್‌ಪಿ ಒಮ್ಮೆಲೆ ಏರಿದ್ದರ ಬಗ್ಗೆ ಒಳ್ಳೆಯ ಮಾತಾಡಿ ನಾಯ್ಡುನ ಮಾತಿಗೆ ಹಚ್ಚಿ, ಮುಂದೆ ತಾನು ಸಿನಿಮಾ ಮಾಡಬೇಕೆಂದಿರುವುದರ ಬಗ್ಗೆ ಬಾಯಿ ಬಿಡಿಸಿದ. ಅವರೆಲ್ಲರ ಫೋಟೊ ತೆಗೆದುಕೊಂಡು ಸಂದರ್ಶನ ಮುಗಿಸಿದ. ಮನೆಯಲ್ಲಿ ದೇಶ್ವಂತರ ಸಂಗಡ ಬಕುಲಾರ ಸಂಗಡ ಆತ್ಮೀಯವಾಗಿ ಮಾತಾಡಿ ಸಮಯ ಕಳೆದು, ರಾತ್ರಿ ಬೆಂಗಳೂರಿಗೆ ಮರಳಿ ಹೋದ ಪಾಟೀಲ.

***

### ಬೆಳಕಿನ ಹಬ್ಬದ ಸಂಭ್ರಮ

ದೀಪಾವಳಿ ಅಂದರೆ ಮೂರು ನಾಕು ದಿನ ಹಬ್ಬವೇ. ನರಕ ಚತುರ್ದಶಿಯ ಹಿಂದಿನ ದಿನ ಬಚ್ಚಲಮನೆಯ ಬಾವಿಗೆ ಕೆಮ್ಮಣ್ಣು ಶೇಡಿಯ ಚಿತ್ತಾರ ಬಿಡಿಸಿ ರಾತ್ರಿ ಬಿಂದಿಗೆಯಲ್ಲಿ ಬಲಿವೇಂದ್ರನನ್ನು ಗಂಗೆಯನ್ನು ಭೂಲೋಕಕ್ಕೆ ಬರಮಾಡಿಕೊಂಡರು. ಬಚ್ಚಲೊಲೆಯ ತಾಮ್ರದ ಹಂಡೆಗೆ ಕಾಡಿಂದ ಹಿಂಡಲ ಮತ್ತು ಮಾಲಿಂಗನ ಬಳ್ಳಿ ತಂದು ಸುತ್ತಿದ್ದರು. ಬೆಳಗ್ಗೆ ನೀರು ಸಳಮಳ ಕಾದಿತ್ತು. ಗಂಡ ಮತ್ತು ಮೊಮ್ಮಗನಿಗೆ ಸ್ವತಃ ಬಕುಲಾಬಾಯಿ ಅರಸಿನ ಬೆರೆಸಿದ ಎಣ್ಣೆಯನ್ನು ಮೈಗೆಲ್ಲ ಹಚ್ಚಿ ಬಿಸಿಬಿಸಿ ನೀರನ್ನು ಎರೆದು ಬೂರೆ ಸ್ನಾನ ಮಾಡಿಸಿದರು. ಮಧ್ಯಾಹ್ನ ಊಟಕ್ಕೆ ಸಿಹಿಕುಂಬಳ ಕಾಯಿಯ ಕಡುಬು. ಮರುದಿನ ಅಮಾವಾಸ್ಯೆ. ರಾತ್ರಿ ಲಕ್ಷ್ಮೀದೇವಿಗೆ ಪೂಜೆ. ಅದರ ಮರುದಿನ ಪಾಡ್ಯದಂದು ಗೋಪೂಜೆ. ಆಕಳಿಗೆ ಹಣ್ಣಡಕೆ, ಗೊಂಡೆ ಹೂ ಪೋಣಿಸಿದ ಸರಗಳಿಂದಲಂಕರಿಸಿ ಮೈಮೇಲೆ ಕೆಮ್ಮಣ್ಣು ಶೇಡಿಯ ಚಿತ್ತಾರದ ಅಚ್ಚುಹಾಕಿದರು. ತಿನ್ನಲು ಹಲವು ಔಷಧೀಯ ಸೊಪ್ಪು ತರಕಾರಿಗಳನ್ನು ಬೆರೆಸಿ ಮಾಡಿದ ದೋಸೆ. ಮನೆಯವರಿಗೂ ಕಾಯಿತುರಿ ಬೆಲ್ಲದೊಂದಿಗೆ ಅದೇ ದೋಸೆ. ಕಮಲಮ್ಮ ಮತ್ತು ಚಂದನಿಕಾಳನ್ನು ತಮ್ಮೊಡನೆ ಸೇರಿಸಿಕೊಂಡರು ಬಕುಲಾ. ಮಧ್ಯಾಹ್ನ ಹೋಳಿಗೆಯೂಟ. ನಾಯ್ಡು ಮತ್ತು ಯುನಿಟ್ಟಿನವರಿಗೆಲ್ಲ ಅವತ್ತು ಆ ಮನೆಯಲ್ಲೇ ಊಟವಾಯಿತು. ಸಾಯಂಕಾಲ ಮನೆಯೊಳಗೆ, ಮನೆಯ ಸುತ್ತೆಲ್ಲ ಸಾಲು ಹಣತೆಗಳ ದೀಪ. ಕತ್ತಲೆಯನ್ನೋಡಿಸುವ ಸಂಕೇತದ ಹಬ್ಬ ಅದು. ಆನಂದ ಮನೆಯೆದುರು ಎತ್ತರನ ಶಮೆಬಿದಿರು, ಗಳ ನೆಟ್ಟು, ಅದರ ತುದಿಗೆ 'ಆಕಾಶಬುಟ್ಟಿ'ಯಲ್ಲಿ ದೀಪವನ್ನು ಪ್ರತಿವರ್ಷ ಬೆಳಗಿಸುತ್ತಿದ್ದ. ಇದರಿಂದ ಪ್ರಭಾವಿತನಾದ ನಾಯ್ಡು ಕಥೆಯಲ್ಲಿ ದೀಪಾವಳಿಯ ಸನ್ನಿವೇಶವನ್ನು ಸೇರಿಸಿ ಒಂದು ಚಿತ್ರೀಕರಣ ಮಾಡಿದ್ದ.

ಅವತ್ತು ಬೆಳಗ್ಗೆ ಎರಡು ತಾಸು ಇಲ್ಲಿ ಚಿತ್ರೀಕರಣ ಮುಗಿಸಿ, ಬೇರೆ ಕೆಲಸದ ಮೇಲೆ ತಂಡ ಹೋಗಿತ್ತು.